ವಿಷಯ:- ಚಿಕ್ಕಮಂಗಳೂರು ಜಿಲ್ಲೆಯಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರ ಕಟ್ಟಡಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 481 (1051)

ಶ್ರೀ ಸಿ.ಆರ್.ಸಗೀರ್ ಅಹಮದ (ಚಿಕ್ಕಮಗಳೂರು):- ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 1993-94, 1994-95, 1995-96ನೇ ಸಾಲಿನಲ್ಲಿ ಹೊಸದಾಗಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಆ) ಹೊಸದಾಗಿ ಪ್ರಾರಂಭಿಸಲಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ ನಿರ್ಮಾಣ ಯಾವ ಹಂತದಲ್ಲಿದೆ?

ಇ) ಈ ಎಲ್ಲಾ ಕಟ್ಟಡಗಳಿಗೆ ವೆಚ್ಚವಾಗಿರುವ ಹಣವೆಷ್ಟು? ಈ ಕಟ್ಟಡಗಳ ಕೆಲಸವನ್ನು ಪೂರ್ಣಗೊಳಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಸಚಿವರು):-

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 5 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಪ್ರಾರಂಭಿಸಿದೆ.

ವಿವರ ಕೆಳಗಿನಂತಿದೆ:-

	ತಾಲ್ಲೂಕು	1993-94	94-95	95-96
1)	ಚಿಕ್ಕಮಗಳೂರು	1	1	-
2)	ಕಡೂರು	1	-	2
3)	ತರೀಕೆರೆ	-	1	-
	ಒಟ್ಟು	2	2	2

ಆ) ಆವುತಿ ಗ್ರಾಮದ ಕಟ್ಟಡವು ಲಿಂಟಲ್ ಹಂತದಲ್ಲಿರುತ್ತದೆ. ಮಾರಗೊಂಡನಹಳ್ಳಿ ಕಟ್ಟಡದ ಮೇಲ್ಛಾವಣಿಯ ಹಂತದಲ್ಲಿರುತ್ತದೆ.

ಇ) 1996 ಮಾರ್ಚ್ ಅಂತ್ಯಕ್ಕೆ ಒಟ್ಟು 3,56,003 ರೂ.ಗಳು ಖರ್ಚಾಗಿರುತ್ತವೆ. ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿನ ಅನುದಾನದ ಲಭ್ಯತೆ ಜೊತೆಗೆ ಕಟ್ಟಡ ಕೆಲಸವನ್ನು ಶೀಘ್ರವಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದು.

ವಿಷಯ:- ರಾಜ್ಯದಲ್ಲಿರುವ ಸರ್ಕಾರಿ ಪದವೀಧರ ಕಾಲೇಜುಗಳು